# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577002
ಫ್ಯಾಕ್ಸ್: 08192-208008 ದೂರವಾಣಿ ಸಂಖ್ಯೆ: 08192-208029

ಸಂಖ್ಯೆ:ದಾವಿವಿ/ಮಾಸನಿ/181/2020-21 3968 ದಿನಾಂಕ: 03.12.2020

## :ಅಧಿಸೂಚನೆ:

ವಿಷಯ: ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಹಾಗೂ ಘಟಕ ಕಾಲೇಜುಗಳಲ್ಲಿನ ಡಿಪ್ಲೊಮಾ/ಸ್ನಾತಕ/ ಸ್ನಾತಕೋತ್ತರ ಡಿಪ್ಲೊಮಾ/ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅತಿಥಿ ಉಪನ್ಯಾಸಕರು/ಬೋಧನಾ ಸಹಾಯಕರುಗಳನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:03.12.2020

******

ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಮತ್ತು ಘಟಕ ಕಾಲೇಜುಗಳಲ್ಲಿನ ಈ ಕೆಳಕಂಡ ಡಿಪ್ಲೊಮಾ/ಸ್ನಾತಕ/ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಶೈಕ್ಷಣಿಕ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರು/ಬೋಧನಾ ಸಹಾಯಕರುಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಯುಜಿಸಿ ನಿಯಮಗಳನುಸಾರ **(Ph.D., NET/SLET)** ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹತೆ ಇರುವ ಅಭ್ಯರ್ಥಿಗಳು ದಿನಾಂಕ:15.12.2020 ಹಾಗೂ 16.12.2020 ರಂದು ಪೂರ್ವಾಹ್ನ 10:00ಕ್ಕೆ ವಿಶ್ವವಿದ್ಯಾನಿಲಯದ ಕೇಂದ್ರ ಕಾರ್ಯಾಲಯ, ಶಿವಗಂಗೋತ್ರಿ, (ತೋಳಹುಣಸೆ) ಇಲ್ಲಿ ಏರ್ಪಡಿಸಲಾಗಿರುವ ಸಂದರ್ಶನಗಳಿಗೆ ಹಾಜರಾಗಲು (walk in interview) ತಿಳಿಸಲಾಗಿದೆ. ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆ/ಅನುಭವಕ್ಕೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳು ಹಾಗೂ ಅದರ ಒಂದು ಸೆಟ್ ಜೆರಾಕ್ಸ್ ಪ್ರತಿಯೊಂದಿಗೆ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.

### ಸಂದರ್ಶನದ ದಿನಾಂಕ ಮತ್ತು ವೇಳೆ

| ಕ್ರ.ಸಂ. | ಡಿಪ್ಲೊಮಾ/ಸ್ನಾತಕ/ಸ್ನಾತಕೋತ್ತರ ಡಿಪ್ಲೊಮಾ/ಸ್ನಾತಕೋತ್ತರ ವಿಷಯಗಳು | ದಿನಾಂಕ ಮತ್ತು ವೇಳೆ |
|---|---|---|
| 1 | ಕಲಾ ಮತ್ತು ವಾಣಿಜ್ಯ ನಿಕಾಯದ ವಿಷಯಗಳು :- ಕನ್ನಡ, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಉರ್ದು, ಅಪರಾಧಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ | 15.12.2020<br>10.00 ರಿಂದ 5.30 |
| 2 | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಷಯಗಳು:- ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ರಸಾಯನಶಾಸ್ತ್ರ, ಫ್ಯಾಷನ್ ಟೆಕ್ನಾಲಜಿ, ಗಣಕ ವಿಜ್ಞಾನ, ಯೋಗ ವಿಜ್ಞಾನ | 16.12.2020<br>10.00 ರಿಂದ 5.30 |

ಮೇಲ್ಕಾಣಿಸಿದ **ಡಿಪ್ಲೊಮಾ/ಸ್ನಾತಕ/ಸ್ನಾತಕೋತ್ತರ ಡಿಪ್ಲೊಮಾ/ಸ್ನಾತಕೋತ್ತರ ವಿಷಯಗಳಿಗೆ** ಅತಿಥಿ ಉಪನ್ಯಾಸಕರು/ ಬೋಧನಾ ಸಹಾಯಕರುಗಳನ್ನು ನೇಮಕ ಮಾಡುವ ಅಥವಾ ಮಾಡದಿರುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆಯೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ತತ್ಸಂಬಂಧ ಆಗಮಿಸುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಯಾವುದೇ ರೀತಿಯ ಪ್ರಯಾಣ/ದಿನ ಭತ್ಯೆಗಳನ್ನು ಪಾವತಿಸಲಾಗುವುದಿಲ್ಲ.

ಆದೇಶಾನುಸಾರ

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಸಾರ್ವಜನಿಕ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ಹಾಗೂ ಸೂಚನಾ ಫಲಕಗಳಿಗೆ

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577002

ಫ್ಯಾಕ್ಸ್: 08192–208008 ದೂರವಾಣಿ ಸಂಖ್ಯೆ: 08192–208029


ಸಂಖ್ಯೆ:ದಾವಿವಿ/ಮಾಸನಿ/181/2020–21/4016 ದಿನಾಂಕ: 07.12.2020

## :ಪರಿಷ್ಕೃತ ಅಧಿಸೂಚನೆ:

ವಿಷಯ: ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಹಾಗೂ ಘಟಕ ಕಾಲೇಜುಗಳಲ್ಲಿನ ಡಿಪ್ಲೊಮಾ/ಸ್ನಾತಕ/ ಸ್ನಾತಕೋತ್ತರ ಡಿಪ್ಲೊಮಾ/ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅತಿಥಿ ಉಪನ್ಯಾಸಕರು/ಬೋಧನಾ ಸಹಾಯಕರುಗಳನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ:
1. ವಿವಿ ಅಧಿಸೂಚನೆ ಸಂಖ್ಯೆ: ದಾವಿವಿ/ಮಾಸನಿ/181/2020–21/3968, ದಿನಾಂಕ: 03.12.2020
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:05.12.2020

******

ಉಲ್ಲೇಖ (1)ರ ಅಧಿಸೂಚನೆಯಲ್ಲಿ ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಮತ್ತು ಘಟಕ ಕಾಲೇಜುಗಳಲ್ಲಿನ ಡಿಪ್ಲೊಮಾ/ಸ್ನಾತಕ/ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಶೈಕ್ಷಣಿಕ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರು/ ಬೋಧನಾ ಸಹಾಯಕರುಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಯುಜಿಸಿ ನಿಯಮಗಳನುಸಾರ **(Ph.D., NET/SLET)** ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಈ ಕೆಳಕಂಡ ವಿಷಯಗಳಿಗೆ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ. ಪ್ರಸ್ತುತ ಸದರಿ ವಿಷಯಗಳ ಕಾರ್ಯಭಾರಕ್ಕನುಗುಣವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮುಂದುವರೆದು ಉಲ್ಲೇಖಿತ (1)ರ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

### ಸಂದರ್ಶನದ ದಿನಾಂಕ ಮತ್ತು ವೇಳೆ

| ಕ್ರ.ಸಂ. | ಸ್ನಾತಕೋತ್ತರ ಡಿಪ್ಲೊಮಾ/ಸ್ನಾತಕೋತ್ತರ ವಿಷಯಗಳು | ದಿನಾಂಕ ಮತ್ತು ವೇಳೆ |
|---|---|---|
| 1 | ಕಲಾ ಮತ್ತು ವಾಣಿಜ್ಯ ನಿಕಾಯದ ವಿಷಯಗಳು :– ಇಂಗ್ಲೀಷ್, ಸಮಾಜಶಾಸ್ತ್ರ ಮತ್ತು ಎಂ.ಇಡಿ, ಎಂ.ಬಿ.ಎ. (ಬಿ.ವೋಕ್) | 15.12.2020<br>10.00 ರಿಂದ 5.30 |
| 2 | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಷಯಗಳು:– ಜೀವರಸಾಯನಶಾಸ್ತ್ರ, ಪರಿಸರ ವಿಜ್ಞಾನ. | 16.12.2020<br>10.00 ರಿಂದ 5.30 |

ಆದೇಶಾನುಸಾರ

ಕುಲಸಚಿವರು 07/12/2020

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ – 577002.

ಸಾರ್ವಜನಿಕ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ಹಾಗೂ ಸೂಚನಾ ಫಲಕಗಳಿಗೆ.